# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-06

**ದಿನಾಂಕ 09-01-2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿ.ವಿ.ಯ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಪೂರ್ವಾಹ್ನ 11.00 ಗಂಟೆಗೆ ನಡೆದ ಪ್ರಥಮ ಪಿಂಚಣಿ ಅದಾಲತ್ ನಡವಳಿ.**

**ಉಪಸ್ಥಿತರಿದ್ದ ವಿಶ್ವವಿದ್ಯಾನಿಲಯದ ಪರವಾಗಿ ಅಧಿಕಾರಿಗಳು:**

**ಪ್ರೊ. ಶರಣಪ್ಪ ವಿ ಹಲಸೆ – ಕುಲಪತಿಗಳು**

**ಪ್ರೊ. ಕೆ.ಎಲ್.ಎನ್. ಮೂರ್ತಿ – ಕುಲಸಚಿವರು**

**ಡಾ. ಎ. ಖಾದರ್‌ಪಾಷ – ಹಣಕಾಸು ಅಧಿಕಾರಿಗಳು**

**ಸಾಮಾನ್ಯ ವಿಭಾಗ ಹಾಗೂ ಹಣಕಾಸು ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು.**

ಕುಲಪತಿಗಳು ಮತ್ತು ಕುಲಸಚಿವರು ಹಾಗೂ ಪಿಂಚಣಿದಾರರು ಮತ್ತು ಕುಟುಂಬ ಪಿಂಚಣಿದಾರರನ್ನು ಪ್ರಥಮ ಪಿಂಚಣಿ ಅದಾಲತ್‌ಗೆ ಹಣಕಾಸು ಅಧಿಕಾರಿಗಳು ಸ್ವಾಗತಿಸಿದರು. ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಬೋಧಕ / ಬೋಧಕೇತರ ಪಿಂಚಣಿದಾರರ ಕುಂದುಕೊರತೆಗಳನ್ನು ನಿಯಮಾನುಸಾರ ಕಾಲಮಿತಿಯೊಳಗೆ ನಿವಾರಿಸಲು ಸರ್ಕಾರದ ಆದೇಶದನ್ವಯದಂತೆ ಈ ಪಿಂಚಣಿ ಅದಾಲತ್‌ನ್ನು ಕುಲಪತಿಗಳು, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳ ಉಪಸ್ಥಿತಿಯಲ್ಲಿ ಆಯೋಜಿಸಲಾಗಿದ್ದು ತಮ್ಮ ಕುಂದುಕೊರತೆಗಳಿದ್ದಲ್ಲಿ ಸಲ್ಲಿಸುವಂತೆ ಹಣಕಾಸು ಅಧಿಕಾರಿಗಳು ತಿಳಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಬೋಧಕ ಮತ್ತು ಬೋಧಕೇತರ 20 ಮಂದಿ ಪಿಂಚಣಿ ಅದಾಲತ್‌ನಲ್ಲಿ ಭಾಗವಹಿಸಿದ್ದರು.

ನಿವೃತ್ತ ಬೋಧಕ ಪಿಂಚಣಿದಾರರ ಪರವಾಗಿ, ಡಾ.ಎಂ.ಎಚ್.ಕೃಷ್ಣಪ್ಪ ಹಾಗೂ ಪ್ರೊ. ಜಗದೀಶ ರವರು ನಿವೃತ್ತಿ ಸೌಲಭ್ಯಗಳಲ್ಲಿ ಕಟಾಯಿಸಲಾದ ಆಡಿಟ್ ವಸೂಲಾತಿ ಮಾಡಲಾಗಿರುವ ಮೊಬಲಗನ್ನು ಹಿಂತಿರುಗಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು. ಈ ಸಂಬಂಧ ಹಣಕಾಸು ಅಧಿಕಾರಿಗಳು ಆಡಿಟ್‌ನಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ಮಾತ್ರ ಕಟಾಯಿಸಲಾಗಿದ್ದು, ಸದರಿ ವಸೂಲಾತಿ ಬಗ್ಗೆ ಅಡ್ ಹಾಕ್ ಕಮಿಟಿಗೆ ಚರ್ಚಿಸಿ, ಲೆಕ್ಕ ಪರಿಶೋಧಕರಿಗೆ ಅನುಸರಣಾ ವರದಿ ಮತ್ತು ವಸೂಲಾತಿ ಕೈಬಿಡುವಂತೆ ಕೋರಿ ಪತ್ರ ವ್ಯವಹರಿಸಲಾಗಿದೆ ಎಂದು ತಿಳಿಸಿದರು.

ಬೋಧಕೇತರ ಪಿಂಚಣೆದಾರರ ಪರವಾಗಿ, ಶ್ರೀ ಗಂಗರೇವಣ್ಣ, ರಾಜಶೆಟ್ಟಿ ಇತರರು ಪಿಂಚಣಿ ನಿಧಿಗೆ ವಿ.ವಿ.ಯಿಂದ ಪರಿನಿಯಮ ರಚಿಸಿ ಜಾರಿಗೆ ತರಲು ಹಾಗೂ ಪ್ರತಿ ಮಾಹೆಯ 25 ರಿಂದ 28ನೇ ದಿನಾಂಕದೊಳಗೆ ಪಿಂಚಣಿ ಪಾವತಿಸಬೇಕೆಂದು ಕೋರಿದರು. ಈ ಸಂಬಂಧ ಹಣಕಾಸು ಅಧಿಕಾರಿಗಳು ಪ್ರತಿ ಮಾಹೆಯ ಕೊನೆಯ ಕೆಲಸದ ದಿನಾಂಕದಂದು ಪಿಂಚಣಿ ಪಾವತಿಸಲಾಗುತ್ತಿದೆ ಎಂದು ತಿಳಿಸಿದರು.

ಪಿಂಚಣಿದಾರರ ಪರವಾಗಿ ನಿವೃತ್ತ ಪ್ರೊ. ಎಚ್.ಎಲ್ ವೆಂಕಟೇಶ್ ಮಾತನಾಡಿ 2016ಕ್ಕೆ ಹಿಂದೆ ನಿವೃತ್ತರಾದ ಪಿಂಚಣಿದಾರರಿಂದ ವಸೂಲಿಯಾಗಿರುವ ಮಾಹೆಯಾನ 20,000/- ಮೊತ್ತವನ್ನು (ಎರಡು ತಿಂಗಳು) ನ್ಯಾಯಾಲಯದ ಆದೇಶದಂತೆ ಹಿಂತಿರುಗಿಸಲು ಕೋರಿದರು. ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ ಮಾನ್ಯ ಕುಲಪತಿಗಳು, ಕುಲಸಚಿವ ಮತ್ತು ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು.

ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ರಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಮರಣ ಹೊಂದಿದ ನೌಕರರ ಅವಲಂಬಿತರಿಗೆ ಸರ್ಕಾರದ ಆದೇಶದ ಅನುಸಾರ ಉಪದಾನ, ಪಿಂಚಣಿ ಸೌಲಭ್ಯಗಳನ್ನು ಬಿಡುಗಡೆಗೊಳಿಸಿಲ್ಲವೆಂದು ಹಾಗೂ ಶೀಘ್ರವಾಗಿ ಇತ್ಯರ್ಥಪಡಿಸುವಂತೆ ಶ್ರೀ ಶಿವಕುಮಾರ್ (ದಿ: ಶ್ರೀಮತಿ ರತ್ನಮ್ಮ ರವರ ಪತಿ) ಶ್ರೀಮತಿ ಹರ್ಷಿತಾ ಎಂ.ಜಿ. (ದಿ: ಶ್ರೀ ಗೋವಿಂದು ಜಿ.ಕೆ ರವರ ಮಗಳು) ಮತ್ತು ಇತರರು ಕೋರಿದರು ಈ ಸಂಬಂಧ ಹಣಕಾಸು ಅಧಿಕಾರಿಗಳು ಮರಣ ಹೊಂದಿದ 5 ಮಂದಿ ಸಿಬ್ಬಂದಿಗಳ ಅವಲಂಬಿತರಿಗೆ ಹಾಗೂ ನಿವೃತ್ತಿ ಹೊಂದಿದ ಸಿಬ್ಬಂದಿಯವರಿಗೆ ಪಿಂಚಣಿ ಮತ್ತು ಉಪದಾನ ಪಾವತಿಸುವ ಬಗ್ಗೆ ಒಂದು ತಿಂಗಳೊಳಗೆ ಬಗೆಹರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಕುಲಸಚಿವರು ಪಿಂಚಣಿದಾರರ ಕುಂದುಕೊರತೆಗಳನ್ನು ಸರ್ಕಾರದ ಆದೇಶದನ್ವಯ ಶೀಘ್ರವಾಗಿ ಬಗೆಹರಿಸಲು ಸೂಕ್ತ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಪಿಂಚಣಿದಾರರ ಕುಂದುಕೊರತೆಗಳನ್ನು ಆಲಿಸಿ, ನಿವೃತ್ತಿ ಸೌಲಭ್ಯಗಳಲ್ಲಿ ಕಟಾಯಿಸಲಾದ ಆಡಿಟ್ ವಸೂಲಾತಿಯನ್ನು ಕೈಬಿಡುವ ಬಗ್ಗೆ ಅಡ್ ಹಾಕ್ ಕಮಿಟಿಗೆ ಮಂಡಿಸಲು. ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್) ಯಡಿ ಉಪದಾನ ಮತ್ತು ಪಿಂಚಣಿ ಹಾಗೂ ಇತರೆ ಸೌಲಭ್ಯಗಳನ್ನು ನೀಡುವ ಬಗ್ಗೆ ಮತ್ತು ಪಿಂಚಣಿ ನಿಧಿಯನ್ನು ಹೆಚ್ಚಿಸಲು ಹಾಗೂ ಪ್ರತಿ ಮಾಹೆಯಾನ ನಿಗದಿತ ದಿನಾಂಕಕ್ಕೆ ಪಿಂಚಣಿ ಪಾವತಿ ಹಾಗೂ ಪಿಂಚಣಿ ನಿಧಿಗೆ ಸಂಬಂಧಿಸಿದಂತೆ ಪರಿನಿಯಮಗಳನ್ನು ರಚಿಸಲು ಶೀಘ್ರವೇ ಸೂಕ್ತ ಕ್ರಮವಹಿಸಲಾಗವುದು ಎಂದು ತಿಳಿಸಿದರು.

ಪ್ರಥಮ ಪಿಂಚಣಿ ಅದಾಲತ್‌ನಲ್ಲಿ ಹಾಜರಾಗಿದ್ದ ಎಲ್ಲರಿಗೂ ಹಣಕಾಸು ಅಧಿಕಾರಿಗಳು ವಂದಿಸಿದರು.

**ಹಣಕಾಸು ಅಧಿಕಾರಿ** | **ಕುಲಸಚಿವರು**

**ಕುಲಪತಿಗಳು**